**ಸಂಕೇತ ಸಂಖ್ಯೆ : 62-K ವಿಷಯ : ತೃತೀಯ ಭಾಷೆ — ಕನ್ನಡ**

**Code No. : 62-K Subject : Third Language — KANNADA**

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. 'ನಾಗರಿಕ' ಪದದ ಬಹುವಚನ ರೂಪ

   (ಎ) ನಾಗರಿಕರು (ಬಿ) ನಗರೀಕರು

   (ಸಿ) ನಾಗರೀಕರು (ಡಿ) ನಾಗರಿಕಗಳು

2. ಇವುಗಳಲ್ಲಿ ಅನ್ವರ್ಥನಾಮ

   (ಎ) ರವಿ (ಬಿ) ವ್ಯಾಪಾರಿ

   (ಸಿ) ಸರಕು (ಡಿ) ಲತಾ

3. 'ಮನೆಯಲ್ಲಿ' ಪದದಲ್ಲಿರುವ ವಿಭಕ್ತಿ

   (ಎ) ಪ್ರಥಮಾ (ಬಿ) ತೃತೀಯಾ

   (ಸಿ) ಚತುರ್ಥಿ (ಡಿ) ಸಪ್ತಮೀ

4. 'ಪಡುವಣ' ಪದದ ಸಮಾನಾರ್ಥಕ ಪದ

   (ಎ) ಪೂರ್ವ (ಬಿ) ಪಶ್ಚಿಮ

   (ಸಿ) ದಕ್ಷಿಣ (ಡಿ) ಉತ್ತರ

5. ಇವುಗಳಲ್ಲಿ ಅನ್ಯದೇಶ್ಯಪದ

   (ಎ) ಪಾರು (ಬಿ) ಸಾರು

   (ಸಿ) ಟೂರು (ಡಿ) ಮಾರು

6. 'ಆಗಮನ' ಪದದ ವಿರುದ್ಧಾರ್ಥಕ ಪದ

   (ಎ) ಅಸಮಾನ (ಬಿ) ಆಚಮನ

   (ಸಿ) ನಿರಾಗಮನ (ಡಿ) ನಿರ್ಗಮನ

7. ಉಪಮಾನ ಮತ್ತು ಉಪಮೇಯ ಒಂದೇ ಎಂದು ಹೇಳುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ಉತ್ಪ್ರೇಕ್ಷಾಲಂಕಾರ (ಡಿ) ದೃಷ್ಟಾಂತಾಲಂಕಾರ

8. 'ಸುರೇಂದ್ರ' ಇದು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ (ಬಿ) ವೃದ್ಧಿ ಸಂಧಿ

(ಸಿ) ಸವರ್ಣದೀರ್ಘ ಸಂಧಿ (ಡಿ) ಯಣ್ ಸಂಧಿ

9. ಇವುಗಳಲ್ಲಿ 'ಸರ್ವನಾಮ' ಪದ

(ಎ) ಅಡವಿ (ಬಿ) ಕುರುಡ

(ಸಿ) ಅವನು (ಡಿ) ವಕೀಲ

10. 'ಕವಿ' ಪದದ ಅನ್ಯಲಿಂಗ ರೂಪ

(ಎ) ಕವಿತ (ಬಿ) ಕವನ

(ಸಿ) ಕಾವ್ಯ (ಡಿ) ಕವಯಿತ್ರಿ

11. 'ಥಣ ಥಣ' ಇಲ್ಲಿರುವ ವ್ಯಾಕರಣಾಂಶವಿದು

(ಎ) ಅನುಕರಣಾವ್ಯಯ (ಬಿ) ಜೋಡುನುಡಿ

(ಸಿ) ನುಡಿಗಟ್ಟು (ಡಿ) ಗಾದೆ

12. 'ಓಡು' ಈ ಪದದ ನಿಷೇದಾರ್ಥಕ ರೂಪ

(ಎ) ಓಡುವನು (ಬಿ) ಓಡನು

(ಸಿ) ಓಡಿಯಾನು (ಡಿ) ಓಡಲಿ

13. 'ಮಲಗ್ಯಾವು' ಪದದ ಗ್ರಾಂಥಿಕ ರೂಪ

(ಎ) ಮಲಗಿವೆ (ಬಿ) ಮಲಗುತ್ತವೆ

(ಸಿ) ಮಲಗುವುದು (ಡಿ) ಮಲಗಬಹುದು

14. 'ಕೊರಗಿ ಕೊರಗಿ' ಇಲ್ಲಿರುವ ವ್ಯಾಕರಣಾಂಶವಿದು

(ಎ) ನುಡಿಗಟ್ಟು (ಬಿ) ಜೋಡುನುಡಿ

(ಸಿ) ದ್ವಿರುಕ್ತಿ (ಡಿ) ಉಪಮಾ

15. ರಾಧೇಶನು ಯಾವ ಭಾಷೆಯನ್ನು ಕಲಿಯುತ್ತಿದ್ದಾನೆ ? ಈ ವಾಕ್ಯದ ಕೊನೆಯಲ್ಲಿರುವ ಲೇಖನ ಚಿಹ್ನೆ ಯಾವುದು ?

(ಎ) ಆಶ್ಚರ್ಯ ಸೂಚಕ (ಬಿ) ಅಲ್ಪವಿರಾಮ

(ಸಿ) ಪೂರ್ಣವಿರಾಮ (ಡಿ) ಪ್ರಶ್ನಾರ್ಥಕ

16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : 5 × 1 = 5

| ***'ಅ' ಪಟ್ಟಿ*** | | ***'ಬ' ಪಟ್ಟಿ*** | |
|---|---|---|---|
| i) | ಉಪಮಾಲಂಕಾರ | ಅ) | ಸಿಂಗ |
| ii) | ಬಹುವಚನ | ಆ) | ಕೂಸುಕುನ್ನಿ |
| iii) | ಜೋಡಿಪದ | ಇ) | ಚಂದ್ರನಂಥ ಮುಖ |
| iv) | ತದ್ಭವ ಪದ | ಈ) | ಅಣ್ಣಂದಿರು |
| v) | ಅಂಕಿತನಾಮ | ಉ) | ನಾಗರಿಕ |
| | | ಊ) | ಕವಿತಾ |
| | | ಋ) | ಮುಖ ಕಮಲ |
| | | ಎ) | ಬೇಡಬೇಡ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ: 5 × 1 = 5

17. ಗಾಂಧೀಜಿ ಸರ್ವೋದಯದ ..................... .

18. ಸದಾಕಾಲ ಹರಿವ ನದಿಯನ್ನು ..................... ಎನ್ನುತ್ತಾರೆ.

19. ದೇವತೆಯು ಭರತಕುಮಾರನಿಗೆ .....................ನ್ನು ಕೊಟ್ಟಿತು.

20. ತುಂಬಿದ ಕೊಡ ..................... .

21. ದೇಶ ಸುತ್ತು ..................... ಓದು.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8

22. ಭಾರತೀಯರು ಯಾವ ಬಣ್ಣದವರು ?

23. "ದಪ್ಪ" ಅನ್ನೋದಕೆ ಧಾರವಾಡ ಕಡೆ ಏನೆಂದು ಕರೆಯುತ್ತಾರೆ ?

24. ಗಾಂಧೀಜಿಯವರು ಇಳೆಗೆ ಯಾವ ತತ್ತ್ವವನ್ನು ಬೋಧಿಸಿದರು ?

25. ಹರ್ಷವು ಎಲ್ಲಿ ಅಡಗಿತು ?

26. ಕಾರಂತರಿಗೆ ವಿಶೇಷವಾಗಿ ಯಾವ ಪಾತ್ರ ಸಿಗುತ್ತಿತ್ತು ?

27. ಹಡಗನ್ನು ಕವಿ ಎಷ್ಟು ಭಾಷೆಗಳ ನವಖಂಡ ಎಂದಿದ್ದಾರೆ ?

28. ಲಾಲಾಬಾಗ್ ಯಾವುದರ ಪುನರುತ್ಥಾನವಾಗಿದೆ ?

29. ಭರತ ಭೂತಳಕ್ಕೆ ಸಿಂಗಾರವಾದ ಪುರ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

30. ರಾಮಕೃಷ್ಣ ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯವೇನು ?

31. ಪಂಚ ಪರ್ವತಗಳು ಎಲ್ಲಿವೆ ? ಅವು ಯಾವುವು ?

32. ತಗಡೂರು ರಾಮಚಂದ್ರರಾಯರು ಮಾಡಿದ ಎರಡು ಪ್ರಮುಖ ಕಾರ್ಯಗಳಾವುವು ?

33. ಮಳೆಕೊಯ್ಲಿನ ಕ್ರಮಗಳಾವುವು ?

34. ಶಾಸ್ತ್ರಿಗಳ ಸೊಸೆ ಏಕೆ ನೀರಿಗೆ ಹೊರಡಬೇಕಾಯಿತು ?

35. ಗಾಂಧೀಜಿಯನ್ನು "ಹಿರಿಯ ತಂದೆ" ಎಂದು ಏಕೆ ಕರೆದಿದ್ದಾರೆ ?

36. ತೋರಿಸು ಬಾರೆ ತವರೂರ ಎಂದು ಬಳೆಗಾರ ಹೇಳಿದುದು ಏಕೆ ?

37. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು ?

38. ಹಿರಿಯರು "ಅನಬೇಡಿ ಇಲ್ಲ" ಎನ್ನಲು ಕಾರಣವೇನು ?

39. ಸಿಂಹಾಸನ ವೇರಿದ ಭರತ ಹೇಗೆ ಕಾಣುತ್ತಿದ್ದನೆಂದು ಕವಿ ವರ್ಣಿಸಿದ್ದಾನೆ ?

40. ಚಿನ್ನದ ಕೋಲಿನ ಮಹಿಮೆ ಏನು ?

41. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದುದು ಏಕೆ ?

42. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ ಯಾವ ಯಾವ ಬಗೆಯವು ?

43. ಭರತೇಶನು ಇತರರಿಗಿಂತ ಹೇಗೆ ಭಿನ್ನವಾಗಿದ್ದನೆಂದು ಕವಿ ಹೇಳಿದ್ದಾರೆ ?

44. ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು ?

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಮತ್ತು ಸ್ವಾರಸ್ಯವನ್ನು ಬರೆಯಿರಿ : $4 \times 3 = 12$

45. ಹೂಂ, ಸತ್ತು ಮತ್ತೆ ಬದುಕಿರಿ.

46. ನಿನ್ನೆ ನನಗಿಲ್ಲಿ ಹಸಿರು ಕಾರ್ಡ್ ಸಿಕ್ಕಿದೆ.

47. ಕರ್ನಾಟಕ ಕೀರ್ತಿಧ್ವಜವನ್ನು ನಭದೆತ್ತರಕ್ಕೆ ಎತ್ತಿಹಿಡಿದಿದ್ದಾರೆ.

48. ತುಂಬಲ್ಲಿಲ್ಲವೆ ಬಡವರ ಬಸಿರು

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 3 = 3$

ಸುಳಿಮಿಂಚಿನ ______________________________

______________________________ರತ್ನಾಕರನ ಕೆರೆ.

***ಅಥವಾ***

ಕಾಲನದೂತರು ______________________________

______________________________ಸಿಕ್ಕಲು ಬೇಡಿ.

50. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಬಾಲೆಯು ತನ್ನ ತವರೂರು ಎಲ್ಲಿಹುದೆಂದು ಹೇಳಿದಳು.

— ಮಾನವ ಜನ್ಮ ಏಕೆ ದೊಡ್ಡದು ಎಂದು ಪುರಂದರದಾಸರು ಹೇಗೆ ಹೇಳಿದ್ದಾರೆ ?

51. & 52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ರಾಮಬಾಡದ ದಾರಿಯನ್ನು 'ಮಿನಿ ವಿಶ್ವ' ಎಂದು ಏಕೆ ಕರೆದಿದ್ದಾರೆ ?

— ಅಂತರ್ಜಲ ಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣಗಳೇನು ?

— ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು ? ವಿವರಿಸಿ.

53. ನೀವು ಮಂಗಳೂರು ಜಿಲ್ಲೆ, ಸುಳ್ಯ ತಾಲ್ಲೂಕಿನ ಸುಬ್ರಹ್ಮಣ್ಯದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ದೀಪ್ತಾಂಶು/ದೀಪಶ್ರೀ ಎಂದು ಭಾವಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಬಯಸಿ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

***ಅಥವಾ***

ಮಂಗಳೂರು ಜಿಲ್ಲೆ, ಬೆಳ್ತಂಗಡಿ ತಾಲ್ಲೂಕಿನ ಸವಣೂರಿನಲ್ಲಿರುವ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸವನ್ನ ಕುರಿತು ಒಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದನ್ನು*** ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಕ್ರೀಡೆಯ ಮಹತ್ತ್ವ

— ಗ್ರಂಥಾಲಯದ ಮಹತ್ತ್ವ

— ಜಲಸಂರಕ್ಷಣೆಯ ಮಹತ್ತ್ವ